## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (ಬಿಆರ್‌ಜಿಎಫ್) ಯೋಜನೆಯಡಿಯಲ್ಲಿ ವಿವಿಧ ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಗಳ ಕುರಿತು.

ಓದಲಾಗಿದೆ:

1. ಸರ್ಕಾರದ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ: 18.04.2013.
2. ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು ರವರ ಕಾರ್ಯನಿರ್ವಹಣೆಯ ಬಗ್ಗೆ ನಡೆಸಿದ ಲೆಕ್ಕಪರಿಶೋಧನಾ ವರದಿ ದಿನಾಂಕ:17.02.2014

ಪ್ರಸ್ತಾವನೆ:

ಬಿಆರ್‌ಜಿಎಫ್ ಯೋಜನೆಯ ಅನುಷ್ಠಾನದ ಬಗ್ಗೆ ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳಿಗೆ ಪೂರಕವಾಗಿ ಮೇಲೆ ಓದಲಾದ ಉಲ್ಲೇಖ(2)ರ ಸುತ್ತೋಲೆಯ ಮೂಲಕ ರಾಜ್ಯ ಸರ್ಕಾರವು ಸಹ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು. ಯೋಜನೆಯ 2007-08ರಿಂದ 2012-13ರವರೆಗಿನ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ರಾಜ್ಯದ ಮಹಾಲೇಖಪಾಲರು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ(Performance Audit) ಯನ್ನು ನಡೆಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತದೆ. ವರದಿಯ **ಕಂಡಿಕೆ ಸಂಖ್ಯೆ: 2.2.7.2**ರಲ್ಲಿ ಶಿಫಾರಸ್ಸು ಮಾಡಿದಂತೆ ಜನಸಂಖ್ಯೆ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯ ಆಧಾರದ ಮೇಲೆ ಪಂಚಾಯತ್ ರಾಜ್‌ನ ವಿವಿದ ಹಂತದ ಸಂಸ್ಥೆಗಳಿಗೆ ಅನುದಾನ ನಿಗದಿಪಡಿಸಲು ಮಾರ್ಗಸೂಚಿಗಳನ್ನು ಹೊರಡಿಸುವಂತೆ ಸೂಚಿಸಿರುತ್ತಾರೆ. ಮಹಾಲೇಖಪಾಲರ ವರದಿಯಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿದೆ. ಅದರನ್ವಯ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 50 ಜಿಪಸ 2013, ಬೆಂಗಳೂರು, ದಿನಾಂಕ: 02-05-2014.**

ಮಹಾಲೇಖಪಾಲರು ತಮ್ಮ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ(Performance Audit)ರಲ್ಲಿ ಗಮನಿಸಿರುವ ಹಾಗೂ ಶಿಫಾರಸ್ಸು ಮಾಡಿರುವ ಅಂಶಗಳನ್ನು ಸರ್ಕಾರ ಪರಿಶೀಲಿಸಿದೆ. ಹಿಂದುಳಿದ ಪ್ರದೇಶಗಳ ಅನುದಾನ ನಿಧಿಯನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಿಡುಗಡೆಮಾಡುವಾಗ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲು ಆದೇಶಿಸಲಾಗಿದೆ.

1. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಶೇಕಡ 80:20ರ ಅನುಪಾತದಲ್ಲಿ ಹಂಚಿಕೆ ಮಾಡಬೇಕು.
2. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಲಭ್ಯವಾಗುವ ಅನುದಾನವನ್ನು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳಿಗೆ ಕ್ರಮವಾಗಿ ಶೇಕಡ 10:20:70ರ ಅನುಪಾತದಲ್ಲಿ ಹಂಚಿಕೆ ಮಾಡಬೇಕು.
3. ಕೇಂದ್ರ ಸರ್ಕಾರ ಹೊರಡಿಸಿರುವ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (ಬಿ.ಆರ್.ಜಿ.ಎಫ್) ಮಾರ್ಗಸೂಚಿಗಳ ಅಧ್ಯಾಯ-1ರ ಕಂಡಿಕೆ 1.7ರ ಉಪ ಕಂಡಿಕೆ (ಬಿ) ಮತ್ತು (ಸಿ)ಗಳಲ್ಲಿ ವಿವರಿಸಿರುವಂತೆ, ಸಂಬಂಧಿಸಿದ ಜಿಲ್ಲೆಗಳಿಗೆ ಶೇಕಡ 50ರಷ್ಟು ಅನುದಾನವನ್ನು ಜನಸಂಖ್ಯೆ ಆಧಾರದ ಮೇಲೆ ಹಾಗೂ ಶೇಕಡ 50ರಷ್ಟು ಅನುದಾನವನ್ನು ಪ್ರಾದೇಶಿಕ ವಿಸ್ತೀರ್ಣದ ಆಧಾರಗಳ ಮೇಲೆ ಹಂಚಿಕೆ ಮಾಡಬೇಕು. ಈ ರೀತಿ ಅನುದಾನ ಹಂಚಿಕೆ ಮಾಡುವಾಗ ಡಾ: ನಂಜುಂಡಪ್ಪರವರ ವರದಿ ಮತ್ತು ರಾಜ್ಯ ಹಣಕಾಸು ಆಯೋಗದಲ್ಲಿನ ವರದಿಗಳಲ್ಲಿನ ಮಾನದಂಡಗಳ ಆದಾರದ ಮೇಲೆ ಸಂಬಂಧಿಸಿದ

ಜಿಲ್ಲೆಗಳ ಹಿಂದುಳಿದಿರುವಿಕೆಯ ಸೂಚ್ಯಂಕ, ಅಭಿವೃದ್ಧಿಯ ಹಂತ ಹಾಗೂ ಜಿಲ್ಲೆಗೆ ಸಂಬಂಧಿಸಿದಂತೆ ಅಗತ್ಯವಾಗಿರುವ ನಿರ್ದಿಷ್ಟ ಅದ್ಯತೆಗಳನ್ನು ಗುರುತಿಸಿಕೊಳ್ಳಬೇಕು.

4. ಜಿಲ್ಲೆಯೊಳಗಿನ ತಾಲ್ಲೂಕು ಪಂಚಾಯಿತಿಗಳಿಗೆ ಡಾ॥ ನಂಜುಂಡಪ್ಪರವರ ವರದಿಯಲ್ಲಿ ಸೂಚಿಸಿರುವಂತೆ ಸಮಗ್ರ ಸಂಚಿತ ಅಭಿವೃದ್ಧಿ ಸೂಚ್ಯಾಂಕ (ಸಿ.ಸಿ.ಡಿ.ಐ) ಆಧಾರದ ಮೇಲೆ ಹಂಚಿಕೆ ಮಾಡಬೇಕು.
5. ಗ್ರಾಮ ಪಂಚಾಯಿತಿಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಎರಡನೇ ರಾಜ್ಯ ಹಣಕಾಸು ಆಯೋಗ (ಎಸ್.ಎಸ್.ಎಫ್.ಸಿ) ರವರು ಸೂಚಿಸಿರುವ ಈ ಕೆಳಕಂಡ ಸೂಚ್ಯಾಂಕಗಳಂತೆ ಅನುದಾನ ವಿತರಿಸಬೇಕು.

| ಕ್ರ.ಸಂ | ಸೂಚ್ಯಾಂಕ | ಶೇಕಡವಾರು ಅದ್ಯತೆ |
|---|---|---|
| 1. | ಜನಸಂಖ್ಯೆ | 40 |
| 2. | ಭೌಗೋಳಿಕ ಕ್ಷೇತ್ರ | 20 |
| 3. | ಪ.ಜಾ & ಪ.ಪಂ ಜನಸಂಖ್ಯೆ | 10 |
| 4. | ಅನಕ್ಷರತೆ | 10 |
| 5 | ಆಸ್ಪತ್ರೆಯ ಒಳರೋಗಿಯ ಜನಸಂಖ್ಯೆ | 10 |
| 6. | ಜನ ಸಾಂದ್ರತೆ | 10 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಲ್.ಸಿ.ಬಸವರಾಜು) 3/06/14
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಪ್ರತಿಯನ್ನು ಇವರಿಗೆ:</u>

1. ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಬೆಂಗಳೂರು.
4. ಜಿಲ್ಲಾಧಿಕಾರಿಗಳು, ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಚಿತ್ರದುರ್ಗ ಮತ್ತು ದಾವಣಗೆರೆ.
5. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಚಿತ್ರದುರ್ಗ ಮತ್ತು ದಾವಣಗೆರೆ.
6. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
7. ನಿರ್ದೇಶಕರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
8. ವೆಬ್ ಸೈಟ್ ಮತ್ತು ಕರ್ನಾಟಕ ವಿಕಾಸ.

ಪ್ರತಿ:

1. ಅಪರ ಮುಖ್ಯ ಕಾರ್ಯದರ್ಶಿಗಳು/ ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
2. ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ/ಯೋಜನಾ ಇಲಾಖೆರವರ ಆಪ್ತ ಕಾರ್ಯದರ್ಶಿಗಳು.
3. ನಿರ್ದೇಶಕರು (ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.